ಅಧ್ಯಕ್ಷರು:– ಮಂಡಿಸಲಾಯಿತು.

[ಅನುಬಂಧ–1]

3. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರು):–

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 31ನೇ ಮಾರ್ಚ್ 2006ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಲೆಕ್ಕಾ ಪರಿಶೋಧನೆ (ರಾಜಸ್ವ ಸ್ವೀಕೃತಿ) ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ಮಂಡಿಸಲಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರು):–

1965ರ ಕರ್ನಾಟಕ ಅಬಕಾರಿ ಕಾಯ್ದೆ 71(4)ರ ಪ್ರಕರಣದ ಮೇರೆಗೆ:

1968ರ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳ ನಿಯಮ 8ಕ್ಕೆ ತಿದ್ದುಪಡಿ ಮಾಡಿ ದಿನಾಂಕ 29.06.2007ರಂದು ಹೊರಡಿಸಲಾದ ಎಫ್‌ಡಿ 09 ಸಿಇಎಸ್ 2007ನೇ ಸಂಖ್ಯೆಯ ಅಧಿಸೂಚನೆ.

2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದ ಕಲಂ 89ನೇ ಪ್ರಕರಣದ ಮೇರೆಗೆ:

1. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆಯಡಿ ವರ್ತಕರು ಮಾರಾಟ ಮಾಡುವ ಭತ್ತ ಮತ್ತು ಅಕ್ಕಿ, ಗೋಧಿ, ದಿನಸಿಗಳು, ಅಕ್ಕಿ ಗೋಧಿ ರವೆ, ಗೋಧಿ ಮೈದಾ ಮುಂತಾದವುಗಳ ಮೇಲೆ ದಿನಾಂಕ 01.04.2007ರಿಂದ 01.03.2008ರವರೆಗೆ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 30.03.2007ರಂದು ಹೊರಡಿಸಲಾದ ಎಫ್‌ಡಿ 115 ಸಿಎಸ್‌ಎಲ್ 2007(1)ನೇ ಸಂಖ್ಯೆಯ ಅಧಿಸೂಚನೆ.

1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ ಪ್ರಕರಣ 39ರ ಮೇರೆಗೆ:

2. ಮೀನುಗಾರರು ಮೀನು ಚಟುವಟಿಕೆಗಳಿಗೆ ಬಳಸುವ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು 01.04.2007ರಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ

ದಿನಾಂಕ 30.03.2007ರಂದು ಹೊರಡಿಸಲಾದ ಎಫ್‌ಡಿ 115 ಸಿಎಸ್‌ಎಲ್ 2007 (2) ಸಂಖ್ಯೆಯ ಅಧಿಸೂಚನೆ.

2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದ ಕಲಂ 89ನೇ ಪ್ರಕರಣದ ಮೇರೆಗೆ:

3. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆಯಡಿ ರಬ್ಬರ್ ಟೈರ್‌ಗಳು ಮತ್ತು ಟ್ರ್ಯಾಕ್ಟರ್ ಟ್ಯೂಬ್‌ಗಳ ಮಾರಾಟದ ಮೇಲಿನ ತೆರಿಗೆಯನ್ನು ಶೇ. 4ರಷ್ಟು ಕಡಿಮೆಗೊಳಿಸಿ ದಿನಾಂಕ 30.03.2007ರಂದು ಹೊರಡಿಸಲಾದ ಎಫ್‌ಡಿ 15 ಸಿಎಸ್‌ಎಲ್ 2007(3)ನೇ ಸಂಖ್ಯೆಯ ಅಧಿಸೂಚನೆ.

4. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆಯಡಿ ದಿನಾಂಕ 01.04.2007ರಿಂದ ಜಾರಿಗೆ ಬರುವಂತೆ ವರ್ತಕರು ಖರೀದಿಸಿರುವ ಮೋಟಾರು ವಾಹನಗಳ ಮಾರಾಟ ಮತ್ತು ಅಂತಹ ಮಾರಾಟ ವಾಹನಗಳಿಗೆ ಬಳಸುವ ವಸ್ತುಗಳ ಮೇಲೆ ವರ್ತಕರು ಪಾವತಿಸಬೇಕಾದ ನಿವ್ವಳ ತೆರಿಗೆಗೆ ಯಾವುದೇ ರಿಯಾಯಿತಿ ಮತ್ತು ಮೋಟಾರು ವಾಹನ ಕಾಯ್ದೆ 1998ರಡಿ ಅಂತಹ ಮೋಟಾರು ವಾಹನಗಳನ್ನು ಮಾರಾಟ ಮಾಡುವ ಮುನ್ನ ರಾಜ್ಯದಲ್ಲಿ ನೋಂದಾಯಿಸುವ ಬಗ್ಗೆ ದಿನಾಂಕ 31.03.2007ರಂದು ಹೊರಡಿಸಲಾದ ಎಫ್‌ಡಿ 115 ಸಿಎಸ್‌ಎಲ್ 2007 (4)ನೇ ಸಂಖ್ಯೆಯ ಅಧಿಸೂಚನೆ.

5. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದಡಿ ಅಧಿಸೂಚನೆ ಸಂಖ್ಯೆ ಎಫ್‌ಡಿ 55 ಸಿಎಸ್‌ಎಲ್ 2005 (10) ದಿನಾಂಕ 23.03.2005ನ್ನು ದಿನಾಂಕ 01.04.2007ರಿಂದ ಜಾರಿಗೆ ಬರುವಂತೆ ದಿನಾಂಕ 30.03.2007ರಂದು ಹೊರಡಿಸಲಾದ ಎಫ್‌ಡಿ 115 ಸಿಎಸ್‌ಎಲ್ 2007(5)ನೇ ಸಂಖ್ಯೆಯ ಅಧಿಸೂಚನೆ.

6. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆಗೆ ಸಂಬಂಧಿಸಿದಂತೆ ಅಧಿಸೂಚನೆ ಸಂಖ್ಯೆ ಎಫ್‌ಡಿ 116 ಸಿಎಸ್‌ಎಲ್ 2006 (7) ದಿನಾಂಕ 31.03.2006ನ್ನು ದಿನಾಂಕ 01.04.2007ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ದಿನಾಂಕ 30.03.2007ರಂದು ಹೊರಡಿಸಲಾದ ಎಫ್‌ಡಿ 115 ಸಿಎಸ್‌ಎಲ್ 2007(6)ನೇ ಸಂಖ್ಯೆಯ ಅಧಿಸೂಚನೆ.

7. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆಗೆ ಅಧಿನಿಯಮದಡಿ ದಿನಾಂಕ 24.10.2005 ರಂದು ಹೊರಡಿಸಲಾದ ಎಫ್‌ಡಿ 300 ಸಿಎಸ್‌ಎಲ್ 2005 ಸಂಖ್ಯೆಯ

ಅಧಿಸೂಚನೆಗೆ ದಿನಾಂಕ 01.04.2007 ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ದಿನಾಂಕ 30.03.2007ರಂದು ಹೊರಡಿಸಲಾದ ಎಫ್‌ಡಿ 115 ಸಿಎಸ್‌ಎಲ್ 2007(7)ನೇ ಸಂಖ್ಯೆಯ ಅಧಿಸೂಚನೆ.

8. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದಡಿ ದಿನಾಂಕ 30.04.2005 ರಂದು ಹೊರಡಿಸಲಾದ ಎಫ್‌ಡಿ 197 ಸಿಎಸ್‌ಎಲ್ 2005(6)ನೇ ಸಂಖ್ಯೆಯ ಅಧಿಸೂಚನೆಯನ್ನು ದಿನಾಂಕ 01.04.2007 ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ದಿನಾಂಕ 30.03.2007ರಂದು ಹೊರಡಿಸಲಾದ ಎಫ್‌ಡಿ 115 ಸಿಎಸ್‌ಎಲ್ 2007(8)ನೇ ಸಂಖ್ಯೆಯ ಅಧಿಸೂಚನೆ.

9. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದಡಿ ಪ್ರವೇಶಿಸುವ ಬಂಡವಾಳ ವಸ್ತುಗಳ ಮೇಲೆ ದಿನಾಂಕ 01.04.2007ರಿಂದ ಜಾರಿಗೆ ಬರುವಂತೆ ದಿನಾಂಕ 30.03.2007ರಂದು ಹೊರಡಿಸಲಾದ ಎಫ್‌ಡಿ 115 ಸಿಎಸ್‌ಎಲ್ 2007(9)ನೇ ಸಂಖ್ಯೆಯ ಅಧಿಸೂಚನೆ.

10. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದಡಿ ದಿನಾಂಕ 01.04.2007ರಿಂದ ಜಾರಿಗೆ ಬರುವಂತೆ ಕೆಲವು ಸರಕುಗಳನ್ನು ಕೈಗಾರಿಕಾ ಕಚ್ಚಾ ವಸ್ತುಗಳನ್ನಾಗಿ ಮತ್ತು ಪ್ಯಾಕಿಂಗ್ ವಸ್ತುಗಳನ್ನಾಗಿ ನಿರ್ದಿಷ್ಟಪಡಿಸಿ ದಿನಾಂಕ 30.03.2007ರಂದು ಹೊರಡಿಸಲಾದ ಎಫ್‌ಡಿ 115 ಸಿಎಸ್‌ಎಲ್ 2007(10)ನೇ ಸಂಖ್ಯೆಯ ಅಧಿಸೂಚನೆ.

11. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದಡಿ ದಿನಾಂಕ 01.04.2007ರಿಂದ ಜಾರಿಗೆ ಬರುವಂತೆ ಕಡಿತಗೊಳಿಸಲಾಗಿರುವ ಕಚ್ಚಾ ವಸ್ತುಗಳ ತೆರಿಗೆಯ ಮೇಲೆ ಶೇ. 3ರಷ್ಟು ತೆರಿಗೆಯನ್ನು ವಿಧಿಸಿ ದಿನಾಂಕ 30.03.2007ರಂದು ಹೊರಡಿಸಲಾದ ಎಫ್‌ಡಿ 115 ಸಿಎಸ್‌ಎಲ್ 2007(11)ನೇ ಸಂಖ್ಯೆಯ ಅಧಿಸೂಚನೆ.

12. ಕ್ಯಾಪಿಟಿವ್ ಜನರೇಷನ್ ಸೆಟ್ಟುಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಗುರುತಿಸಲ್ಪಟ್ಟ ಕೆಲವು ಕೈಗಾರಿಕಾ ಭಾಗಗಳಿಗೆ (ತಯಾರಿಕಾ ಅಥವಾ ಸಂಸ್ಕರಣೆಗೆ ತೊಡಗಿರುವುದಕ್ಕೆ ಸಂಬಂಧಿಸಿದಂತೆ) ಮಾರಾಟ ಮಾಡುವ ಡೀಸೆಲ್ ಮೇಲೆ ವರ್ತಕರು ಪಾವತಿಸಬೇಕಾದ ಮಾರಾಟ ತೆರಿಗೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಶೇ. 4ಕ್ಕೆ ಕಡಿಮೆಗೊಳಿಸಿ ಸಂಬಂಧಪಟ್ಟ ಪ್ರಾಧಿಕಾರದವರು ಘೋಷಣಾ ಪತ್ರವನ್ನು ಸಲ್ಲಿಸುವ ಷರತ್ತಿನ ಬಗ್ಗೆ

ದಿನಾಂಕ 30.03.2007ರಂದು ಹೊರಡಿಸಲಾದ ಎಫ್‌ಡಿ 115 ಸಿಎಸ್‌ಎಲ್ 2007(12) ನೇ ಸಂಖ್ಯೆಯ ಅಧಿಸೂಚನೆ.

1979ರ ಕರ್ನಾಟಕ ವಿಲಾಸ ತೆರಿಗೆ ಕಾಯ್ದೆಯ 30 ಎ ಪ್ರಕರಣದ ಮೇರೆಗೆ:

13.ಸಾರ್ವಜನಿಕ ಹಿತದೃಷ್ಟಿಯಿಂದ 01.04.2007ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಸಂಖ್ಯೆ ಎಫ್‌ಡಿ 19 ಸಿಎಲ್‌ಟಿ 2000 ದಿನಾಂಕ 22.01.2001ನ್ನು ಹಿಂದಕ್ಕೆ ಪಡೆದು ದಿನಾಂಕ 30.03.2007ರಂದು ಹೊರಡಿಸಲಾದ ಎಫ್‌ಡಿ 115 ಸಿಎಸ್‌ಎಲ್ 2007(13)ನೇ ಸಂಖ್ಯೆಯ ಅಧಿಸೂಚನೆ.

1979ರ ಕರ್ನಾಟಕ ವೃತ್ತಿ ತೆರಿಗೆಗಳು, ವ್ಯಾಪಾರಗಳು, ಕಸುಬುಗಳ ಮತ್ತು ಉದ್ಯೋಗಗಳ ಕಾಯ್ದೆಯ ಕಲಂ 33ರ ಪ್ರಕರಣದ ಮೇರೆಗೆ:

14. ಅಧಿಸೂಚನೆ ಸಂಖ್ಯೆ ಎಫ್‌ಡಿ 1 ಸಿಪಿಟಿ 98 (1) ದಿನಾಂಕ 31–03–1998ನ್ನು ದಿನಾಂಕ 01.04.2007ರಿಂದ ಜಾರಿಗೆ ಬರುವಂತೆ ರದ್ದುಪಡಿಸಿ ದಿನಾಂಕ 30.03.2007ರಂದು ಹೊರಡಿಸಲಾದ ಎಫ್‌ಡಿ 115 ಸಿಎಸ್‌ಎಲ್ 2007(14)ನೇ ಸಂಖ್ಯೆಯ ಅಧಿಸೂಚನೆ.

1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ 31ರ ಪ್ರಕರಣದ ಮೇರೆಗೆ:

15. 1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆಯನ್ವಯ ಸಾರ್ವಜನಿಕ ಹಿತದೃಷ್ಟಿಯಿಂದ ವರ್ತಕರು ಪಾವತಿಸಬೇಕಾದ ಕಚ್ಚಾ ಎಣ್ಣೆಯ ಮೇಲಿನ ಪ್ರವೇಶಕ್ಕೆ ಶೇ. 1ರಷ್ಟು ಕಡಿತ ಗೊಳಿಸಿ ದಿನಾಂಕ 01.04.2007ರಿಂದ ಜಾರಿಗೆ ಬರುವಂತೆ ದಿನಾಂಕ 30.03.2007ರಂದು ಹೊರಡಿಸಲಾದ ಎಫ್‌ಡಿ 115 ಸಿಎಸ್‌ಎಲ್ 2007(15)ನೇ ಸಂಖ್ಯೆಯ ಅಧಿಸೂಚನೆ.

2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದ ಕಲಂ 89ನೇ ಪ್ರಕರಣದ ಮೇರೆಗೆ:

16. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದಡಿ ದಿನಾಂಕ 01.04.2007ರಿಂದ ಜಾರಿಗೆ ಬರುವಂತೆ ಸಂಯುಕ್ತ ಅಮೇರಿಕಾದ ವಿದೇಶಿ ರಾಯಭಾರಿಯನ್ನು ಹೊರತುಪಡಿಸಿ ಹೊರಡಿಸಲಾದ ದಿನಾಂಕ 30.03.2007ರಂದು ಹೊರಡಿಸಲಾದ ಎಫ್‌ಡಿ 115 ಸಿಎಸ್‌ಎಲ್ 2007(16)ನೇ ಸಂಖ್ಯೆಯ ಅಧಿಸೂಚನೆ.

1979ರ ಕರ್ನಾಟಕ ವಿಲಾಸ ತೆರಿಗೆ ಕಾಯ್ದೆಯ 30 ಎ ಪ್ರಕರಣದ ಮೇರೆಗೆ:

17. ಸಂಯುಕ್ತ ಅಮೇರಿಕಾದ ಡಿಪ್ಲೊಮ್ಯಾಟಿಕ್ ಮಿಷನ್ ಸದಸ್ಯರು ಡಿಪ್ಲೋಮ್ಯಾಟಿಕ್ ಮಿಷನ್‌ಗೆ ಪಾವತಿಸಬೇಕಾದ ತೆರಿಗೆಗೆ ವಿನಾಯಿತಿಯಿಂದ ಹೊರತುಪಡಿಸಿ ದಿನಾಂಕ

30.03.2007ರಂದು ಹೊರಡಿಸಬೇಕಾದ ಎಫ್‌ಡಿ 115 ಸಿಎಸ್‌ಎಲ್ 2007(17)ನೇ ಸಂಖ್ಯೆಯ ಅಧಿಸೂಚನೆ.

2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದ ಕಲಂ 89ನೇ ಪ್ರಕರಣದ ಮೇರೆಗೆ:

18. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದಡಿ ಬಂಡವಾಳ ವಸ್ತುವಾಗಿರುವ ಕರಚಾಲಿತ ಹಾಲು ಹಿಂಡುವ ಯಂತ್ರ (Milk Master Machine) ಕ್ಕೆ ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 17.03.2007ರಂದು ಹೊರಡಿಸಲಾದ ಎಫ್‌ಡಿ 458 ಸಿಎಸ್‌ಎಲ್ 2006ನೇ ಸಂಖ್ಯೆಯ ಅಧಿಸೂಚನೆ.

19. ದಿನಾಂಕ 01.04.2007ರಿಂದ ಜಾರಿಗೆ ಬರುವಂತೆ ಸಿಮೆಂಟ್ ಇಟ್ಟಿಗೆಗಳ ವ್ಯಾಪಾರಕ್ಕೆ ಸಂಬಂಧಿಸಿದಂತೆ ಹೂಡುವಳಿಯಾಗಿ ಬಳಸುವ ಸಿಮೆಂಟ್ ಮುಂತಾದವುಗಳ ಮೇಲೆ ಪಾವತಿಸಿದ ಹೂಡುವಳಿ ತೆರಿಗೆಯನ್ನು ಯಾವುದೇ ವರ್ತಕರು ಪಾವತಿಸಬೇಕಾದ ನಿವ್ವಳ ತೆರಿಗೆಯನ್ನು ಲೆಕ್ಕಮಾಡುವಾಗ ಕಡಿತಗೊಳಿಸುವಂತೆ ನಿರ್ಬಂಧ ಹಾಕಿ ದಿನಾಂಕ 30.03.2007 ರಂದು ಹೊರಡಿಸಲಾದ ಎಫ್‌ಡಿ 141 ಸಿಎಸ್‌ಎಲ್ 2007(1)ನೇ ಸಂಖ್ಯೆಯ ಅಧಿಸೂಚನೆ.

20. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದಡಿ ಅಧಿಸೂಚನೆ ಸಂಖ್ಯೆ ಎಫ್‌ಡಿ 116 ಸಿಎಸ್‌ಎಲ್ 2006 (10) ದಿನಾಂಕ 31–03–2006 ನ್ನು ದಿನಾಂಕ 01.04.2007ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ದಿನಾಂಕ 30.03.2007ರಂದು ಹೊರಡಿಸಲಾದ ಎಫ್‌ಡಿ 141 ಸಿಎಸ್‌ಎಲ್ 2007 (2) ನೇ ಸಂಖ್ಯೆಯ ಅಧಿಸೂಚನೆ.

21. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದಡಿ ಕೈಗಾರಿಕಾ ಕಚ್ಚಾ ವಸ್ತುವಿಗೆ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ 21.05.2007ರಂದು ಹೊರಡಿಸಲಾದ ಎಫ್‌ಡಿ 97 ಸಿಎಸ್‌ಎಲ್ 2007ನೇ ಸಂಖ್ಯೆಯ ಅಧಿಸೂಚನೆ.

22. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದಡಿ ಪ್ಲಾಸ್ಟಿಕ್ ಅಥವಾ ರಬ್ಬರನ್ನು ಬಳಸದೆ ಕೈಯಿಂದ ತಯಾರಿಸಲ್ಪಟ್ಟ ಕೊಲ್ಲಾಪುರಿ ಚರ್ಮದ ಪಾದರಕ್ಷೆಗಳ ಮೇಲೆ ತಕ್ಷಣದಿಂದ ಜಾರಿಗೆ ಬರುವಂತೆ ತೆರಿಗೆ ವಿನಾಯಿತಿ ನೀಡಿ ದಿನಾಂಕ 27–01–2007ರಂದು ಹೊರಡಿಸಲಾದ ಎಫ್ ಡಿ 534 ಸಿಎಸ್ ಎಲ್ 2005ನೇ ಸಂಖ್ಯೆಯ ಅಧಿಸೂಚನೆ.

23. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದಡಿ ಅಧಿಸೂಚನೆ ಸಂಖ್ಯೆ ಎಫ್‌ಡಿ 116 ಸಿಎಸ್‌ಎಲ್ 2006(9) ದಿನಾಂಕ 31.03.2006ಕ್ಕೆ ದಿನಾಂಕ 01.01.2007ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ದಿನಾಂಕ 04.04.2007ರಂದು ಹೊರಡಿಸಲಾದ ಎಫ್‌ಡಿ 43 ಸಿಎಸ್‌ಎಲ್ 2007(1) ನೇ ಸಂಖ್ಯೆಯ ಅಧಿಸೂಚನೆ.

24. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದಡಿ ಅಧಿಸೂಚನೆ ಸಂಖ್ಯೆ ಎಫ್‌ಡಿ 116 ಸಿಎನ್ 2006(16) ದಿನಾಂಕ 06.04.2006ಕ್ಕೆ ದಿನಾಂಕ 01.01.2007ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ದಿನಾಂಕ 04.04.2007ರಂದು ಹೊರಡಿಸಲಾದ ಎಫ್‌ಡಿ 43 ಸಿಎಸ್‌ಎಲ್ 2007(2) ನೇ ಸಂಖ್ಯೆಯ ಅಧಿಸೂಚನೆ.

1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ ಪ್ರಕರಣ 39ರ ಮೇರೆಗೆ:

1. ರಾಜ್ಯದಲ್ಲಿ ಅಂತಿಮವಾಗಿ ಖರೀದಿಸಲಾದ ಕಬ್ಬಿನಿಂದ ತಯಾರಿಸಲ್ಪಡುವ ಕಂದಸಾರಿ ಸಕ್ಕರೆಯ ಮೇಲಿನ ತೆರಿಗೆ ಮತ್ತು ಉಪ ಕರಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯತಿ ನೀಡಿ ದಿನಾಂಕ 16.01.2007ರಂದು ಹೊರಡಿಸಲಾದ ಎಫ್‌ಡಿ 309 ಸಿಎಸ್ ಎಲ್ 2006ನೇ ಸಂಖ್ಯೆಯ ಅಧಿಸೂಚನೆ.

2. 1957ರ ಕೇಂದ್ರ ಮಾರಾಟ ತೆರಿಗೆ ಕಾಯ್ದೆ ನಿಯಮಗಳ ನಿಯಮ 6ಕ್ಕೆ ತಿದ್ದುಪಡಿ ಮಾಡಿ ದಿನಾಂಕ 28.05.2007ರಂದು ಹೊರಡಿಸಲಾದ ಎಫ್‌ಡಿ 143 ಸಿಎಸ್‌ಎಲ್ 2007ನೇ ಸಂಖ್ಯೆಯ ಅಧಿಸೂಚನೆ.

3. 1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯಡಿ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ 21.03.2007ರಂದು ಹೊರಡಿಸಲಾದ ಎಫ್‌ಡಿ 60 ಸಿಎಸ್‌ಎಲ್ 2007ನೇ ಸಂಖ್ಯೆಯ ಅಧಿಸೂಚನೆ.

1958ರ ಕರ್ನಾಟಕ ಮನರಂಜನಾ ತೆರಿಗೆ ನಿಯಮ 18ರ ಪ್ರಕರಣದ ಮೇರೆಗೆ:

1958ರ ಕರ್ನಾಟಕ ಮನರಂಜನಾ ತೆರಿಗೆ ನಿಯಮಗಳ ನಿಯಮ 19 ಮತ್ತು 20ಕ್ಕೆ ತಿದ್ದುಪಡಿ ಮಾಡಿ ದಿನಾಂಕ 22.05.2007ರಂದು ಹೊರಡಿಸಲಾದ ಎಫ್‌ಡಿ 30 ಸಿಇಎಕ್ಸ್ 2005ನೇ ಸಂಖ್ಯೆಯ ಅಧಿಸೂಚನೆ.

1958ರ ಕರ್ನಾಟಕ ಮನರಂಜನಾ ತೆರಿಗೆ ಕಾಯ್ದೆ 7 (ಎ) ಪ್ರಕರಣದ ಮೇರೆಗೆ:

ಸರ್ಕಾರಿ ಆದೇಶ ಸಂಖ್ಯೆಯು ಐಟಿಕೆಸಿ/296/ಟಿಟಿಟಿ/2000 ದಿನಾಂಕ 20.01.2003ರನ್ವಯ ದಿನಾಂಕ 01.04.2002ರಿಂದ 31.03.2007ರವರೆಗೆ ನಿರ್ಮಿಸಲಾದ

ಮಲ್ಟಿಪ್ಲೆಕ್ಸ್ ಥಿಯೇಟರ್‌ನ ಮೊದಲ ಮೂರು ವರ್ಷಗಳ ಅವಧಿಗೆ ಶೇ. 100ರಷ್ಟನ್ನು ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ ಹಾಗೂ ನಂತರದ ಎರಡು ವರ್ಷಗಳ ಅವಧಿಗೆ ಶೇ. 75 ರಂತೆ ವಿನಾಯಿತಿ ನೀಡಿ ದಿನಾಂಕ 01.06.2007ರಂದು ಹೊರಡಿಸಲಾದ ಎಫ್‌ಡಿ 15 ಸಿಇಎಕ್ಸ್ 2005ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

1983ರ ಕರ್ನಾಟಕ ಶಿಕ್ಷಣ ಅಧಿನಿಯಮ (1995ರ ಕರ್ನಾಟಕ ಅಧಿನಿಯಮ-1) 145 ರ ಪ್ರಕರಣದ ಮೇರೆಗೆ:

1. 2005ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತುಗಳು ಮತ್ತು ನಿಬಂಧನೆಗಳು) ನಿಯಮಗಳನ್ನು ದಿನಾಂಕ 12.01.2006ರಂದು ಹೊರಡಿಸಲಾದ ಇಡಿ 104 ಎಸ್‌ಇಪಿ 2005ನೇ ಸಂಖ್ಯೆಯ ಅಧಿಸೂಚನೆ.

2. 1999ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ನೇಮಕಾತಿಯ ನಿಬಂಧನೆ ಮತ್ತು ಷರತ್ತುಗಳು) ನಿಯಮಗಳ ಅನುಸೂಚಿ 6ಕ್ಕೆ ತಿದ್ದುಪಡಿ ಮಾಡಿ ದಿನಾಂಕ 04-01-2007ರಂದು ಹೊರಡಿಸಲಾದ ಇಡಿ 79 ಎಸ್‌ಎಲ್‌ಬಿ 2006ನೇ ಸಂಖ್ಯೆಯ ಅಧಿಸೂಚನೆ.

1983ರ ಕರ್ನಾಟಕ ಶಿಕ್ಷಣ ಅಧಿನಿಯಮ (1995ರ ಕರ್ನಾಟಕ ಅಧಿನಿಯಮ-1) 143 ರ ಪ್ರಕರಣದ ಮೇರೆಗೆ:

1. 1998ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಮೇಲ್ಮನವಿ, ಪರಿಷ್ಕರಣೆ ಮತ್ತು ಪರಿಶೀಲನೆ) ನಿಯಮಗಳಿಗೆ ತಿದ್ದುಪಡಿ ಮಾಡಿ ಶಿಕ್ಷಣ ಇಲಾಖೆಯ ಅಧಿಕಾರಿಗಳ ಕಾರ್ಯಹಂಚಿಕೆ ಕುರಿತು ದಿನಾಂಕ 02.12.2006ರಂದು ಹೊರಡಿಸಲಾದ ಇಡಿ 54 ವಿವಿಧ 2005ನೇ ಸಂಖ್ಯೆಯ ಅಧಿಸೂಚನೆ.

2. 1998ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಮೇಲ್ಮನವಿ, ಪರಿಷ್ಕರಣೆ ಮತ್ತು ಪರಿಶೀಲನೆ) ನಿಯಮಗಳಿಗೆ ತಿದ್ದುಪಡಿ ಮಾಡಿ ಶಿಕ್ಷಣ ಇಲಾಖೆಯ ಅಧಿಕಾರಿಗಳ ಕಾರ್ಯಹಂಚಿಕೆ ಕುರಿತು ದಿನಾಂಕ 29.03.2007ರಂದು ಹೊರಡಿಸಲಾದ ಇಡಿ 09 ವಿವಿಧ 2007ನೇ ಸಂಖ್ಯೆಯ ಅಧಿಸೂಚನೆ.

1978ರ ಕರ್ನಾಟಕ ರಾಜ್ಯ ನಾಗರೀಕರ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ:

2007ರ ಕರ್ನಾಟಕ ಸಾಮಾನ್ಯ ಸೇವೆಗಳೂ (ಪದವಿ ಪೂರ್ವ ಶಿಕ್ಷಣ) ನಿಯಮಗಳ ಅನುಸೂಚಿಗೆ ತಿದ್ದುಪಡಿ ಮಾಡಿ ದಿನಾಂಕ 09.04.2007ರಂದು ಹೊರಡಿಸಲಾದ ಇಡಿ 72 ಡಿಜಿಓ 2001ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ಮಂಡಿಸಲಾಗಿದೆ.

4. ಅರ್ಜಿಯನ್ನೊಪ್ಪಿಸುವುದು

ಅಧ್ಯಕ್ಷರು: ಮಾನ್ಯ ಸದಸ್ಯರಾದ ಶ್ರೀ ಗಂಗಾಧರ ನಾಗೇಶ್‌ಭಟ್‌ರವರ, ಡಾ॥ ಚಂದ್ರಶೇಖರ ದಾಮ್ಲೆಯವರ ಸಂಪಾದಕತ್ವದಲ್ಲಿ ಹಂಪಿ ವಿಶ್ವವಿದ್ಯಾನಿಲಯ ದ್ವಿತೀಯ ಪಿ.ಯು.ಸಿ.ಯ ಸಮಾಜಶಾಸ್ತ್ರದ ಪಠ್ಯಪುಸ್ತಕದಲ್ಲಿ ಜಾತಿ ಪದ್ಧತಿಯ ಕುರಿತು ಸತ್ಯಕ್ಕೆ ದೂರವಾದ ಮಾತು ಉಲ್ಲೇಖಿಸಿರುವುದನ್ನು ಹಿಂತೆಗೆದುಕೊಳ್ಳುವ ಬಗೆಗಿನ ಅರ್ಜಿಯನ್ನು ಸಭೆಗೆ ಒಪ್ಪಿಸಲಾಗಿದೆ.

5. ಚುನಾವಣಾ ಪ್ರಸ್ತಾವ:

ವಿಷಯ: ಕರ್ನಾಟಕದ ವಿವಿಧ ಸ್ಥಾಯಿ ಸಮಿತಿಗಳಿಗೆ ಸದಸ್ಯರನ್ನು ಚುನಾಯಿಸುವ ಬಗ್ಗೆ:–

ಶ್ರೀ ಬಸವರಾಜ ಎಸ್ ಹೊರಟ್ಟಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು (ಶ್ರೀ ಎಂ.ಪಿ. ಪ್ರಕಾಶ್ ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

(ಅ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 265(1) ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

(ಆ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 268(1)ನೇ ನಿಯಮದ ಅನುಸಾರವಾಗಿ ಈ ಸಭೆ ಅಂದಾಜುಗಳ ಸಮಿತಿಗೆ ಹದಿನೆಂಟು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

(ಇ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ 271(1) ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.